# ರೆಡ್ ಕಾರ್ಪೆಟ್ ಬೀಚ್!

ಬೀಚ್ ಎಂದೊಡನೆ ಥಟ್ಟನೆ ನೆನಪಾಗುವುದು ಮರಳು. ಕಡಲ ತಟದ ಮರಳಲ್ಲಿ ಗೂಡು ಕಟ್ಟಿಯೊ, ಪ್ರೀತಿ ಪಾತ್ರರ ಹೆಸರು ಬರೆದೋ, ಅಲೆಗಳು ತಂದುಬಿಡುವ ಕಪ್ಪೆಚಿಪ್ಪುಗಳನ್ನು ಹೆಕ್ಕಿಯೋ ಆನಂದಿಸುವವರು ಬಹುತೇಕರು. ಆದರೆ, ಚೀನಾದಲ್ಲಿರುವ ಈ ಬೀಚ್‌ನಲ್ಲಿ ಮರಳಿಲ್ಲ. ಕಪ್ಪೆಚಿಪ್ಪುಗಳಿಲ್ಲ. ಕಡಲ ತಟದ ತುಂಬಾ ಕೆಂಪು ಕೆಂಪನೆ ಹುಲ್ಲು ಹಾಸು!.

ಹೌದು, ದೂರದಿಂದ ಕಣ್ಣು ಹಾಯಿಸಿದರೆ ಗಣ್ಯರನ್ನು ಸ್ವಾಗತಿಸಲು ಹಾಸುವ ರೆಡ್ ಕಾರ್ಪೆಟ್ ರೀತಿ ಕೆಂಪು ಹುಲ್ಲಿನ ಹಾಸು ನಮ್ಮನ್ನು ಸ್ವಾಗತಿಸುತ್ತದೆ. ಬೀಚ್ ಸುತ್ತಲೂ ಬೆಳೆಯುವ ಜೊಂಡು ಹುಲ್ಲು ಬೆಳೆಯುತ್ತಾ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಸಾಮಾನ್ಯವಾಗಿ ಏಪ್ರಿಲ್– ಮೇ ತಿಂಗಳಲ್ಲಿ ಈ ಹುಲ್ಲು ಬೆಳೆಯಲು ಶುರುವಿಡುತ್ತದೆ. ಆಗಸ್ಟ್‌ನಿಂದ ಅಕ್ಟೋಬರ್ ತಿಂಗಳಲ್ಲಿ ಹುಲ್ಲು ಕಡುಗೆಂಪು ಬಣ್ಣಕ್ಕೆ ತಿರುಗುತ್ತದೆ. ನವೆಂಬರ್ ಮಧ್ಯದವರೆಗೂ ಆ ಅಂದವನ್ನು ಸವಿಯಬಹುದು. ನವೆಂಬರ್ ತಿಂಗಳ ಕೊನೆಯಲ್ಲಿ ಗಿಡಗಳು ಸಾಯಲು ಶುರುವಿಡುತ್ತವೆ. ವಸಂತಕಾಲ ಬಂದಾಗ ಮತ್ತೆ ಹುಟ್ಟುತ್ತವೆ. ಈ ವೈಶಿಷ್ಟ್ಯದಿಂದಾಗಿ ಇದು ‘ಪನ್‌ಜಿನ್ ರೆಡ್ ಬೀಚ್’ ಎಂತಲೇ ಹೆಸರುವಾಸಿಯಾಗಿದೆ.

ವಿಶ್ವದ ಅತಿ ದೊಡ್ಡ ಜೌಗು ಪ್ರದೇಶದಲ್ಲಿ ಈ ಬೀಚ್ ಇದ್ದು, ಕೆಂಪನೆ ಜೊಂಡು ಹುಲ್ಲು ಬೆಳೆಯಲೂ ಅದೇ ಕಾರಣ ಎನ್ನುವರು ಸಂಶೋಧಕರು. ಅಷ್ಟೇ ಅಲ್ಲ; ಇದು ಪ್ರಾಣಿ–ಪಕ್ಷಿಗಳ ಆವಾಸಸ್ಥಾನವೂ ಹೌದು. ಸುಮಾರು 260 ಬಗೆಯ ಪಕ್ಷಿಗಳು, 400 ಬಗೆಯ ಕಾಡು ಪ್ರಾಣಿಗಳು ಈ ಪ್ರದೇಶದಲ್ಲಿ ವಾಸವಾಗಿವೆ. ಅಳಿವಿನಂಚಿನಲ್ಲಿರುವ ಕ್ರೌನ್ಡ್ ಕೊಕ್ಕರೆ ಹಾಗೂ ಕಪ್ಪು ಕೊಕ್ಕಿನ ಬೆಳ್ಳಕ್ಕಿಗಳು ಇಲ್ಲಿ ಕಾಣಸಿಗುತ್ತವೆ. ಈ ಸ್ಥಳ ಕೊಕ್ಕರೆಗಳ ತವರುಮನೆ ಎಂದೇ ಕರೆಸಿಕೊಳ್ಳುತ್ತದೆ. ಪ್ರತಿ ವರ್ಷ ಆಸ್ಟ್ರೇಲಿಯಾದಿಂದ ಸಾವಿರಾರು ಹಕ್ಕಿಗಳು ಸಂತಾನೋತ್ಪತ್ತಿ ಕಾರ್ಯಕ್ಕಾಗಿ ಇಲ್ಲಿಗೆ ವಲಸೆ ಬರುತ್ತವೆ. ಹಾಗಾಗಿ ಇದು ಜೀವವೈವಿಧ್ಯದ ತಾಣವಾಗಿಯೂ ಹೆಸರುವಾಸಿಯಾಗಿದೆ.

ಛಾಯಾಚಿತ್ರ ಹವ್ಯಾಸಿಗಳಿಗೆ ಇದು ಹೆಚ್ಚು ಖುಷಿ ಕೊಡುವ ಸ್ಥಳ, ಎತ್ತ ಕ್ಯಾಮೆರಾ ಇಟ್ಟರೂ ಅತ್ಯುತ್ತಮ ಚೌಕಟ್ಟು ಸಿಗುತ್ತದೆ. ಅದ್ಭುತ ಸೀನರಿ ಫೋಟೊ ಫ್ರೇಮ್‌ನಲ್ಲಿ ಲಗತ್ತಾಗುತ್ತದೆ. ಆದರೆ, ಎಲ್ಲ ಸಮಯದಲ್ಲೂ ಈ ಬೀಚ್ ಪ್ರವೇಶಕ್ಕೆ ಅವಕಾಶವಿರುವುದಿಲ್ಲ. ಅಲ್ಲಿನ ವಾತಾವರಣ ನೋಡಿಕೊಂಡು ಪ್ರವಾಸಿಗರಿಗೆ ಬೀಚ್ ವೀಕ್ಷಿಸಲು ಅವಕಾಶ ಕಲ್ಪಿಸಲಾಗುತ್ತದೆ. ಪನ್‌ಜಿನ್ ನಗರದಿಂದ 18 ಕಿಲೊ ಮೀಟರ್ ದೂರದಲ್ಲಿರುವ ಈ ಬೀಚ್ ಅನ್ನು 1984ರಿಂದ ಈಚೆಗೆ ಪರಿಸರಸ್ನೇಹಿ ಪ್ರವಾಸಿತಾಣವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಬಸ್, ಮಿನಿ ಬಸ್, ಟ್ಯಾಕ್ಸಿ ಮೂಲಕ ಈ ಬೀಚ್ ತಲುಪಬಹುದು.

ಕಾಡು ಪ್ರಾಣಿಗಳಿರುವ ಪ್ರದೇಶವಾಗಿರುವುದರಿಂದ ಪ್ರವಾಸಿಗರು ಇಲ್ಲಿಗೆ ಬರಲು ಭಯಪಡಬೇಕಿಲ್ಲ. ಸಾಕಷ್ಟು ರಕ್ಷಣಾ ಕ್ರಮಗಳನ್ನೂ ಪ್ರವಾಸಿಗರಿಗಾಗಿ ಕೈಗೊಳ್ಳಲಾಗಿದೆ. ಪ್ರವಾಸಿಗರ ವೀಕ್ಷಣೆಗಾಗಿ ಒಂದಷ್ಟು ದೂರದವರೆಗೆ ವಾಕಿಂಗ್ ಟ್ರ್ಯಾಕ್ ಕೂಡ ಇದೆ. ಚೀನಿಗರು ಪ್ರೀತಿಯಿಂದ ಈ ಬೀಚ್ ಅನ್ನು ‘ರೆಡ್ ಕಾರ್ಪೆಟ್ ಬೀಚ್’ ಎಂದು ಕರೆಯುವರು.

■ ಸುಮಾ ಬಿ.

